ಸಕ್ಷದಲ್ಲಿ ಮೇಲ್ಕಂಡ ರೂಲ್ಸ ಆಫ್ ಪ್ರಾಕ್ಟಿಸ್‌ನಲ್ಲಿ ಉದಹರಿಸಿರುವ ಪಾಯಿದೆ ನಂತರ ನಾಶಪಡಿಸಲ್ಪಡುತ್ತವೆ ತಿಳಿಯುವದು ಅಂದರೆ ಫೈಸಲಾದ ಮೂರು ವರುಷದ ವಳಗ.

ಕೋರ್ಟುಗಳ ಹೆಸರು.	ತಾರೀಖು ಸಲ್ಲಿ.	ಮೊಕದ್ದಮೆಗಳ ಸ್ವಭಾವ.			
		ಸಿವಿಲ್ ಸೂಟುಗಳು.	ಅಮಲ್ಜಾರಿ.	ಮಿಸಲೇನಿಯಸ್.	ಅಪೀಲು.
ಶಿವಮೊಗ್ಗ ಡಿಸ್ಟ್ರಿಕ್ಟ್ ಕೋರ್ಟು.	1905—1906	1ರ ಲಾ॥ 3ರ ವರಿಗೆ	1ರ ಲಾ॥ 28ರ ವರಿಗೆ	1ರಲಾ॥226ರ ವರಿಗೆ	1ರಲಾ॥215ರ ವರಿಗೆ
ಶಿವಮೊಗ್ಗ ಸಬ್ ಜಡ್ಜಿ ಕೋರ್ಟು.		1ರಿಂದ 154	1ರಿಂದ 124	1ರಿಂದ 100	1ರಿಂದ 212
ಶಿವಮೊಗ್ಗ ಮುನ್ಸೀಫ್ ಕೋರ್ಟು.		1ರಿಂದ 920	1ರಿಂದ 1620	1ರಿಂದ 1062	ಡಿಟೋ
ಚಿತ್ರದುರ್ಗ ಮುನ್ಸೀಫ್ ಕೋರ್ಟು.		1ರಿಂದ 1430	1ರಿಂದ 1696	1ರಿಂದ 1061	ಡಿಟೋ
ಸಾಗರ ಮುನ್ಸೀಫ್ ಕೋರ್ಟು.		1ರಿಂದ 540	1ರಿಂದ 910	1ರಿಂದ 660	ಡಿಟೋ
ಚಿಕ್ಕಮಗಳೂರು ಮುನ್ಸೀಫ್ ಕೋರ್ಟು.		1ರಿಂದ 705	1ರಿಂದ 993	1ರಿಂದ 662	ಡಿಟೋ
ಲೇಟ ಎಡೆಹಳ್ಳಿ ಮುನ್ಸೀಫ್ ಕೋರ್ಟು.		1ರಿಂದ 427	1ರಿಂದ 620	1ರಿಂದ 425	ಡಿಟೋ

ಆರ್. ಬಿ. ಫ್ಲವ್ಮರ್, ಆಫೀಸರ್ ಇನ್ ಛಾರ್ಜ್ ಸೆಂಟ್ರಲ್ ರಿಕಾರ್ಡ್, ಶಿವಮೊಗ್ಗ ಡಿವಿಜ್.

ಬೆಂಗಳೂರು ಸಬ್ ಜಡ್ಜ್‌ರವರ ಕ್ವೋರ್ಟ್‌ನಲ್ಲಿ.

ಸ್ ೧೯೦೮—೦೯ನೆ ಇಸವಿ ಮಿ॥ ಅರ್ಜೀ ನಂಬರು 649.

ಮೈಸೂರು ಗವರ್ನಮೆಂಟಿನಲ್ಲಿ ಅಸ್ಸಿಟಲ್ ಅಸಿಸ್ಟೆಂಟರಾಗಿ ಗುಬ್ಬಿಲಿದ್ದು ಬೆಂಗಳೂರಲ್ಲಿ 29—10—08ರಲ್ಲಿ ಫವತಿಪಟ್ಟ ಡಿ. ಬಿ. ಲಕ್ಷ್ಮಣ ಮೊದಲಿಯಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಕುಪ್ಪುಸಾಮಿ ಮೊದಲಿಯಾರ್ರು, 2ನೆ ಜಗನ್ನಾಥ ಮೊದಲಿಯಾರ್ರು ಮೈನರ್, ಗಾರ್ಡಿಯರ್ ಡಿ. ಬಿ. ರಾಮಚಂದ್ರ ಮೊದಲಿಯಾರ್ರು, ಮೃತಪಟ್ಟ ಸದರೀ ಲಕ್ಷ್ಮಣ ಮೊದಲಿಯಾರ್ರಿಗೆ ಮುಖ್ಯ ಬಾಧ್ಯರಾಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಲಕ್ಷ್ಮಣ ಮೊದಲಿಯಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 2,395—0—0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಸ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಚಂದ್ರ ಮೊದಲಿಯಾರ್ರ ಅರ್ಜಿಯನ್ನು ಸ್ ೧೯೦೯ನೆ ಇಸವಿ ಮಾರ್ಚಿ 19ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮಣ ಮೊದಲಿಯಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೯ನೆ ಇಸವಿ ಮಾರ್ಚಿ 2ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೮—೦೯ನೆ ಇಸವಿ ಮಿ॥ ಅರ್ಜೀ ನಂಬರು 742.

ಬೆಂಗಳೂರು ತಾಲ್ಲೂಕು ಹೊರವಾವು ಅಗರದಲ್ಲಿದ್ದು ಫವತಿಪಟ್ಟ ಸುಂಕಾರಡ್ಡಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಮುನಿಯಪ್ಪನ ಮಗ ಸಂಜೀವರಡ್ಡಿ, ಮೃತಪಟ್ಟ ಸದರೀ ಸುಂಕಾರಡ್ಡಿಗೆ ಮುಖ್ಯ ವಾರಸುದಾರ್ರು ಆಗಬೇಕೆಂಬ ಹಕ್ಕುದಾರಿ ಮೇಲೆ ಹೊರವಾವು ಅಗರದ ಸ್ಥಳದಲ್ಲಿ ಮೃತಪಟ್ಟ ಸುಂಕಾರಡ್ಡಿ ಜಿಂದಗಿ ಬಗ್ಯಾಗಿ ಬರತಕ್ಕ 338-0-0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಸ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಂಜೀವರಡ್ಡಿ ಅರ್ಜಿಯನ್ನು ಸ್ ೧೯೦೯ನೆ ಇಸವಿ ಮಾರ್ಚಿ 26ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಂಕಾರಡ್ಡಿ ಆಸ್ತಿಗೆ ಹಕ್ಕುದಾರರಾದ ವಿಶಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೯ನೆ ಇಸವಿ ಮಾರ್ಚಿ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1908—09ನೆ ಇಸವಿ ಮಿ॥ ಅರ್ಜಿ ನಂಬರ್ 746.

ಬೆಂಗಳೂರು ಕಂಟೋನ್ಮೇಲರ್ಸ್ ಆಫೀಸಿನಲ್ಲಿದ್ದು ಛವತಿಪಟ್ಟ ವೆಂಕಟರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ನಗರ್ತರ ಪ್ಯಾಟೇಲಿರುವ ವೆಂಕಟ್ರಾಯರ ಹೆಂಡತಿ ಅಮ್ಮಕ್ಕಂಣೆವ್ಮ, ಮೃತಪಟ್ಟ ಸದರೀ ವೆಂಕಟರಾಯರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ವೆಂಕಟರಾಯರ ಜಿಂದಗಿ ಬಗ್ಯಾಗಿ ಬರತಕ್ಕ 480—0—0 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಮ್ಮಕ್ಕಂಣೆವ್ಮನ ಅರ್ಜಿಯನ್ನು 1909ನೆ ಇಸವಿ ಮಾರ್ಚಿ 19ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಕೊಡಿಸುವತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಾಯರ ಆಸ್ತಿಗೆ ಹಕ್ಕುದಾರರಾದ ವಿಶಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1909ನೆ ಇಸವಿ ಮಾರ್ಚಿ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1908-09ನೆ ಇಸವಿ ಮಿ॥ ಅರ್ಜೀ ನಂಬರ್ 748.

ಚಿಕ್ಕಬಳ್ಳಾಪುರದ ತಾಲ್ಲೂಕು ನಂದಿ ಹೋಬಳಿ ಸುಲ್ತಾನ್‌ಪೇಟೇಲಿದ್ದು ಛವತಿಪಟ್ಟ ಮಾಳಂ ರುಕ್ಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 2ನೆ ಮಾಕಂ ಪುಟ್ಟೈಯ್ಯಶೆಟ್ಟಿ, 1ನೆ ಸುಬ್ಬರಾಯಶೆಟ್ಟಿ, 3ನೆ ರಾಮಸ್ವಾಮಿಶೆಟ್ಟಿ, 4ನೆ ಕೃಷ್ಣಯ್ಯಶೆಟ್ಟಿ, 5ನೆ ರಂಗೈಯಶೆಟ್ಟಿ, ಮೈನರ್, ಗಾರ್ಡಿಯರ್ ಸುಬ್ಬರಾಯಶೆಟ್ಟಿ, ಮೃತಪಟ್ಟ ಸದರೀ ರುಕ್ಮಯ್ಯನವರಿಗೆ ಖಾಸಾ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಸುಲ್ತಾನ್‌ಪೇಟೇಲಿ ವಾಸಸ್ಥರಾಗಿ ಮೃತಪಟ್ಟ ರುಕ್ಮಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ 6,900 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬರಾಯಶೆಟ್ಟಿ ವಗೈರೇರ ಅರ್ಜಿಯನ್ನು ಸ್ಯ 1909ನೆ ಇಸವಿ ಮಾರ್ಚಿ 19ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪ್ರಾಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರುಕ್ಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1909ನೆ ಇಸವಿ ಮಾರ್ಚಿ 2ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮಯ್ಯರ್,
ಸಬ್ ಜಡ್ಜ್.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ಮುಂತಾವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚಪ್ಪ ವಾಹೇ ಯಾ ಕ್ವಾರ್ಟರಿಗೆ		ದಾವಮುಪಾಯಿ ಪ್ರಕಾರ ದರಗಳು.
ಚಾಲ್ತಿ ವರುಷದ ಗೆಜೆಟಿ ಕಾಪಿ 1ಕ್ಕೆ, ರೆಗ್ಯುಲೇರ್ಷ ಯಾ ಆಕ್ಟ್ಟಿಗಳು ಯಾವದೂ ಇಲ್ಲದಿದ್ದರೆ.		ರೂ. ಆ. 0 8

ಹಿಂದಿನ ವರುಷದ ಗೆಜೆಟಿ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮುಕ್ಕಂ 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಏರಿಯಾದಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂ॥ 21ನೆ ಮುಕ್ಕಂ 24205—6—ಜೆ. 6200ನೆ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ವೇಲ್ಕಂಡ ರಿಯಾಯಿತಿ ದರವು, ನಾಡ್ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

1900ನೆ ಇಸವಿ ಆಗಸ್ಟು 21ನೆ ಮುಕ್ಕಂ 2633—41 ಮಿಸ್. 558ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ್ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ್ ಅಥವಾ ಕನ್ನಡ ಗೆಜೆಟ್ ಅರ್ಧ ಚಾರ್ಜಿಗೆ ಕೊಡಲ್ಪಡುತ್ತೆ.